<u>ಅಸಲು ದಾವಾ ಸಂಖ್ಯೆ **-115/2023**</u> ಪಿ.ಡಬ್ಲ್ಯೂ**:-2**

ದಿನಾಂಕಃ **13.08.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು ರೈತಾಪಿ ಕೆಲಸ ಮಾಡುತ್ತಿದ್ದೇನೆ. ನನಗೆ 3 ಎಕರೆ ಜಮೀನು ಇರುತ್ತದೆ. ಹನುಮಂತಪ್ಪರವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅಂದರೆ ಶೇಷಗಿರಿಯಪ್ಪ, ಮುದ್ದಹನುಮಂತಪ್ಪ, ಸಿದ್ದಪ್ಪ(ವಾದಿ), ಹನುಮಂತಮ್ಮ, ಗಂಗಮ್ಮ ಮತ್ತು ನೀಲಮ್ಮ. ಶೇಷಗಿರಿಯಪ್ಪ ಮತ್ತು ಮುದ್ದಹನುಮಂತಪ್ಪ ಈಗ ಜೀವಂತ ಇರುವುದಿಲ್ಲ. ಸಿದ್ದಪ್ಪರವರಿಗೆ ಸರ್ವೆ ನಂ.74 ಮತ್ತು 75 ಆಸ್ತಿಗಳಿರುತ್ತವೆ. ಸರ್ವೆ ನಂ.74 ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸರ್ವೆ ನಂ.75 ಆಸ್ತಿಯು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ.75 ಆಸ್ತಿಯು ಸಹ ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.74 ರ ಆಸ್ತಿಯಲ್ಲಿ ಶೇಷಗಿರಿಯಪ್ಪ, ಮುದ್ದಹನುಮಂತಪ್ಪ ಮತ್ತು ಸಿದ್ದಪ್ಪ(ವಾದಿ) ಪ್ರತ್ಯೇಕವಾಗಿ ಸುಮಾರು 15 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ಮೇಲ್ಕಂಡ 3 ಜನರು ಸುಮಾರು 15 ವರ್ಷಗಳಿಂದಲೂ ಪ್ರತ್ಯೇಕವಾಗಿ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಸರ್ವೆ ನಂ.75 ರ ಆಸ್ತಿಯು 1 ನೇ ಪ್ರತಿವಾದಿಗೆ 2022 ನೇ ಸಾಲಿನಲ್ಲಿ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ಹನುಮಂತಪ್ಪರವರು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸರ್ವೆ ನಂ.75 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅಲ್ಲ ಅದು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಈ ದಿನ ವಾದಿಯ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ.

ದಾವಾ ಐಟಂ ನಂ.2 ರ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿದ್ದರೂ ಸಹ ವಾದಿಯ ಮಾತುಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ವಾದಿಯ ಕುಟುಂಬದ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದ ಹನುಮಂತಪ್ಪನಿಗೆ ಸರೋಜಮ್ಮ ಮತ್ತು ಸುನಂದಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮುದ್ದ ಹನುಮಂತಪ್ಪನಿಗೆ ಸುನಂದಮ್ಮ ಎಂಬ ಹೆಂಡತಿಯ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.